1109 ಶ್ರೀ ರಘುಪತಿ ಭಟ್. ಕೆ (ಉಡುಪಿ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅವಿಭಜಿತ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಬಾಡಿಗೆಗೆ ಓಡಿಸುವ ಆಟೋ ರಿಕ್ಷಾಗಳಿಗೆ ಗ್ಯಾಸ್‌ಕಿಟ್ ಅಳವಡಿಕೆ ಕಡ್ಡಾಯ ಹಾಗೂ ನಗರ ಮತ್ತು ಗ್ರಾಮಾಂತರ ಪರ್ಮಿಟ್‌ಗಳೆಂಬ ಭೇದ ಕಲ್ಪಿಸಿರುವುದರಿಂದ ತೊಂದರೆ ಆಗುತ್ತಿರುವ ವಿಚಾರವನ್ನು ರಿಕ್ಷಾ ಚಾಲಕ-ಮಾಲೀಕರು ಸರ್ಕಾರದ ಗಮನಕ್ಕೆ ತಂದಿದ್ದಾರೆಯೇ;

ಆ) ಹಾಗಿದ್ದಲ್ಲಿ, ಎರಡು ಸಮಸ್ಯೆಗಳನ್ನು ಸಾರ್ವಜನಿಕ ಹಿತದೃಷ್ಟಿಯಿಂದ ದಕ್ಷಿಣ ಕನ್ನಡ-ಉಡುಪಿ ಜಿಲ್ಲೆಗಳ ಮಟ್ಟಿಗೆ ಆದೇಶ ಸಡಲೀಕರಣಗೊಳಿಸುವುದಕ್ಕಾಗಿ ಸಚಿವರು ರಿಕ್ಷಾ ಚಾಲಕ ನಿಯೋಗಕ್ಕೆ ಭರವಸೆ ನೀಡಿರುವುದು ನಿಜವೇ;

ಇ) ಹೌದಾದಲ್ಲಿ, ಗ್ಯಾಸ್‌ಕಿಟ್ ಕಡ್ಡಾಯ ಹಾಗೂ ನಗರ-ಗ್ರಾಮಾಂತರ ಎಂಬ ಪರ್ಮಿಟ್ ಭೇದವನ್ನು ಎಂದಿನಿಂದ ರದ್ದು ಗೊಳಿಸಲಾಗುವುದು?

ಶ್ರೀ ಆರ್.ಅಶೋಕ (ಸಾರಿಗೆ ಸಚಿವರು) :

ಅ) ಹೌದು.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

769 ಶ್ರೀ ಶ್ರೀನಿವಾಸ್. ಎಂ(ಮಂಡ್ಯ) : ಮಾನ್ಯ ಪ್ರವಾಸೋದ್ಯಮ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು-ಬೆಂಗಳೂರು ರೈಲ್ವೆ ಜೋಟಿ ಮಾರ್ಗದ ಕಾಮಗಾರಿಯು ಮಂದಗತಿಯಲ್ಲಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಇದಕ್ಕೆ ಕಾರಣಗಳೇನು;

ಇ) ಮೈಸೂರು-ಬೆಂಗಳೂರು ರೈಲ್ವೆ ಜೋಡಿ ಮಾರ್ಗದ ಕಾಮಗಾರಿಗಳು ಕೇಂದ್ರ ಸರ್ಕಾರ ತನ್ನ ಪಾಲಿನ ಅನುದಾನವನ್ನು ಬಿಡುಗಡೆ ಮಾಡಿದೆಯೇ;

ಈ) ಹಾಗಿದ್ದಲ್ಲಿ ಎಷ್ಟು ಪ್ರಮಾಣದ ಅನುದಾನವನ್ನು ಬಿಡುಗಡೆ ಮಾಡಿದೆ.